# ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹಿರಿಯೂರು

**ಉಪಸ್ಥಿತರುಃ- ಶ್ರೀಮತಿ. ಸುಜಾತ ಸುವರ್ಣ ಬಿ,**
**ಬಿ.ಕಾಂ., ಎಲ್.ಎಲ್.ಬಿ.,**
**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,**
**ಹಿರಿಯೂರು , ಚಿತ್ರದುರ್ಗ ಜಿಲ್ಲೆ.**

**ಅಸಲು ದಾವಾ ಸಂಖ್ಯೆ 45/2016**

ದಿನಾಂಕಃ 12 ನೇ ಜೂನ್ – 2026.

**ವಾದಿ ಃ ಶ್ರೀಮತಿ ರಜಿನಿ ಉಮಾಪತಿ**

(ವಾದಿಯರ ಪರವಾಗಿಃ ಶ್ರೀ ಬಿ.ಪಿ.ಕೆ . , ವಕೀಲರು)

– ವಿರುದ್ಧ –

**ಪ್ರತಿವಾದಿಯರು ಃ ಜಿ.ಸಿ ಉಮಾಪತಿ ಮೃತಪಟ್ಟಿರುತ್ತಾರೆ**
**ಅವರ ವಾರಸುದಾರರು ಮತ್ತು ಇತರರು**

( 1 ನೇ ಪ್ರತಿವಾದಿ ಮೃತಪಟ್ಟಿರುತ್ತಾರೆ)
( 2 ನೇ ಪ್ರತಿವಾದಿ ಪರವಾಗಿ ಶ್ರೀ ಎಲ್.ವಿ., ವಕೀಲರು )
(3 ನೇ ಪ್ರತಿವಾದಿಯರ ಪರಃ ಶ್ರೀ ಎ.ಬಿ ., ವಕೀಲರು)
(1(ಎ) ಪ್ರತಿವಾದಿಯರ ಪರಃ ಶ್ರೀ ಪಿ.ಕೆ.ಹೆಚ್., ವಕೀಲರು)

**ಮಧ್ಯಂತರ ಅರ್ಜಿ ಸಂಖ್ಯೆ- 13 ರ ಪಕ್ಷಗಾರರು**

**ಅರ್ಜಿದಾರರು / 2 ನೇ ಪ್ರತಿವಾದಿಯರು ಃ ಮಂಜುನಾಥ**

– ವಿರುದ್ಧ –

**ಎದುರುದಾರರು /ವಾದಿ ಃ ಶ್ರೀಮತಿ ರಜಿನಿ ಉಮಾಪತಿ**

SUJATHA SUVARNA B
Digitally signed by SUJATHA SUVARNA B
Date: 2026.06.16 12:16:22 +0530

| | | |
|---|---|---|
| i | ಯಾವ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆಃ – | ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 16 ಸಹವಾಚಕ 151 ರ ಅಡಿಯಲ್ಲಿ |
| ii | ಯಾವ ಪರಿಹಾರಕ್ಕಾಗಿಃ– | ದಾವಾ ಅನುಸೂಚಿ 1, 2, 4, 5 ನ್ನು ಹೊಡೆದು ಹಾಕಬೇಕೆಂದು |
| iii | ಯಾವ ದಿನಾಂಕದಂದು ಅರ್ಜಿಯನ್ನು ಸಲ್ಲಿಸಲಾಗಿದೆಃ– | ದಿನಾಂಕಃ 11.08.2025 |
| iv | ಅರ್ಜಿಯ ಸಂಖ್ಯೆಃ | 13 |
| v | ಅರ್ಜಿಗೆ ವಿರುದ್ಧವಾಗಿ ಆಕ್ಷೇಪಣೆಗಳನ್ನು ಸಲ್ಲಿಸಿದ ದಿನಾಂಕಃ– | 12.09.2025 |
| vi | ಸದರಿ ಅರ್ಜಿಯ ಮೇಲೆ ಘೋಷಿಸಿದ ಆದೇಶದ ದಿನಾಂಕಃ– | 12.06.2026 |

## ಮಧ್ಯಂತರ ಅರ್ಜಿ ಸಂಖ್ಯೆ 13 ರ ಮೇಲೆ ಆದೇಶ

2 ನೇ ಪ್ರತಿವಾದಿಯು ಮಧ್ಯಂತರ ಅರ್ಜಿ 13 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 16 ಸಹವಾಚಕ 151 ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ದಾವಾ ಶೆಡ್ಯೂಲ್ ನಲ್ಲಿ ಕಾಣಿಸಿದಂತಹ ದಾವಾ ಅನುಸೂಚಿ 1, 2, 4, ಮತ್ತು 5 ನ್ನು ಹೊಡೆದು ಹಾಕಬೇಕೆಂದು ಕೋರಿಕೊಂಡಿರುತ್ತಾರೆ.

2. ಅರ್ಜಿಗೆ ಪೂರಕವಾಗಿ ಅರ್ಜಿದಾರರ ಪರ ವಕೀಲರು ವಾಸ್ತವಾಂಶಗಳ ವಿವರಣಾ ಪತ್ರವನ್ನು ಸಲ್ಲಿಸಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ .

3. ವಾದಿಯು ತನ್ನ ತಕರಾರನ್ನು ಸಲ್ಲಿಸಿ ತಕರಾರಿನಲ್ಲಿ ಹೇಳಿದ ಅಂಶದ ಕಾರಣದಿಂದ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ .

4. ಉಭಯ ಪಕ್ಷಕಾರರ ವಾದವನ್ನು ಆಲಿಸಲಾಯಿತು.

5. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುವ ಅಂಶಗಳುಃ-

1. ವಾದಿಯು ವಾದ ಪತ್ರದ ದಾವಾ ಅನುಸೂಚಿ 1, 2, 4 ಮತ್ತು 5 ನ್ನು ಹೊಡೆದು ಹಾಕಲು ಸಾಕಷ್ಟು ಕಾರಣ ಇದೆ ಎಂಬುದನ್ನು ನೀಡಿರುತ್ತಾರೆಯೇ ?

2. ಯಾವ ಆದೇಶ?

6. ಪ್ರಸ್ಥಾವಿತ ಪ್ರತಿವಾದಿಯರ ಪರ ವಕೀಲರ ವಾದವನ್ನು ಕೇಳಿ, ವಾದಿ ಮತ್ತು ಪ್ರತಿವಾದಿಯರ ಮೌಖಿಕ ಸಾಕ್ಷ್ಯ ಮತ್ತು ದಸ್ತಾವೇಜುಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ನ್ಯಾಯಾಲಯವು ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದೆ.

ಅಂಶ-1 ಃ ನಕಾರಾತ್ಮಕವಾಗಿ,
ಅಂಶ-2 ಃ ಅಂತಿಮ ಆದೇಶದಂತೆ,
ಈ ಕೆಳಕಂಡ ಕಾರಣಗಳಿಗಾಗಿ,

## ಕಾ ರ ಣ ಗಳು

7. ಅಂಶ-1 ಃ ಅರ್ಜಿದಾರರು ತನ್ನ ಅರ್ಜಿಯಲ್ಲಿ 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ತಂದೆ ಯಾಗಿದ್ದು 1 ನೇ ಪ್ರತಿವಾದಿ ಜಿ.ಉಮಾಪತಿ ಇವರು ದಿನಾಂಕ 07.12.2021 ರಂದು ತೀರಿಕೊಂಡಿದ್ದು , ಉಮಾಪತಿಯು 2 ನೇ ಪ್ರತಿವಾದಿಯ ರಕ್ಷಣೆ ಮತ್ತು ಅಭಿರಕ್ಷಣೆಯಲ್ಲಿದ್ದು ಈ ಪ್ರತಿವಾದಿಯು ಯು ಎಸ್ ಎ ಕ್ಯಾಲಿ ಪೋರ್ನಿಯಾ ರಾಜ್ಯದಲ್ಲಿದ್ದು ದಾವಾ ಅನುಸೂಚಿ ಐಟಂ ನಂ.1, 2 , 4 ಮತ್ತು 5 ಅವರ ಸ್ವಯಾರ್ಜಿತ ಆಸ್ತಿಯಾಗಿರುತ್ತದೆಂದು, 1 ನೇ ಪ್ರತಿವಾದಿಯು 12.04.1971 ರಂದು ನೊಂದಾಯಿತ ವ್ಯವಸ್ಥಾ

ಪತ್ರದ ಮೂಲಕ ಪಡೆದು ಕೊಂಡಿದ್ದು ದಾವಾಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿರುತ್ತದೆಂದು , 1 ನೇ ಪ್ರತಿವಾದಿಯು ನೀರಾವರಿ ಇಲಾಖೆಯಲ್ಲಿ ಸೆಕ್ಷನ್ ಇಂಜಿನಿಯರ್ ಆಗಿ ಮಹಾರಾಷ್ಟ್ರ ಸರ್ಕಾರದಲ್ಲಿ ಕೆಲಸವನ್ನು ಮಾಡುತ್ತಿದ್ದು ಅವರು ಕೈತುಂಬ ಸಂಬಳವನ್ನು ಪಡೆದುಕೊಂಡಿದ್ದು, 1 ನೇ ಪ್ರತಿವಾದಿಯ ಹೆಂಡತಿ ಗೌರಮ್ಮ ತೀರಿ ಕೊಂಡ ನಂತರ 2 ನೇ ಪ್ರತಿವಾದಿಯನ್ನು ಅವರ ಸಂಬಂಧಿಯಾದ ಶಿವರುದ್ರಮ್ಮ ಇವರು ನೋಡಿಕೊಂಡಿರುತ್ತಾರೆ, ಸಿದ್ದಯ್ಯ ಇವರು ಕರ್ನಾಟಕ ಸರ್ಕಾರದಲ್ಲಿ ಜೈಲಾಧಿಕಾರಿಯಾಗಿ ಕರ್ತವ್ಯವನ್ನು ಮಾಡುತ್ತಿದ್ದು ಅವರು 2 ನೇ ಪ್ರತಿವಾದಿಯ ಊಟ ವಸತಿ ಮತ್ತು ವಿದ್ಯಾಭ್ಯಾಸ ವನ್ನು ನೀಡಿ ಆಶ್ರಯವನ್ನು ಕೊಟ್ಟಿರುತ್ತಾರೆಂದು ನಮೂದಿಸಿರುತ್ತಾರೆ.

8. ಅರ್ಜಿದಾರರು ಮುಂದುವರೆದು ತಮ್ಮ ಅರ್ಜಿಯಲ್ಲಿ 1 ನೇ ಪ್ರತಿವಾದಿಯು ಅವರ ಜೀವಿತಾಕಾಲದಲ್ಲಿ ಐಟಂ ನಂ.1 ನೇ ಆಸ್ತಿಯನ್ನು ಅವರಿಗೆ ದಿಃ 12.03.2015 ರ ನೊಂದಾಯಿತ ದಾನಪತ್ರದ ಮೂಲಕ ನೀಡಿರುತ್ತಾರೆಂದು ಮತ್ತು ಅದನ್ನು 2 ನೇ ಪ್ರತಿವಾದಿಯರು ದಾನ ಪತ್ರವನ್ನು ಒಪ್ಪಿರುತ್ತಾರೆಂದು, ಅದರಂತೆ ಖಾತೆ ಕೂಡ ಬದಲಾವಣೆಯಾಗಿರುತ್ತದೆ, ಆ ಆಸ್ತಿಯನ್ನು ಕೆ ಐ ಎ ಡಿ ಬಿ ಅವರು ಸ್ವಾಧೀನ ಪಡಿಸಿಕೊಂಡಿದ್ದು ಪರಿಹಾರ ಹಣವನ್ನು ಕೂಡ ಘೋಷಿಸಿದ್ದು ಆ ಹಣವನ್ನು 2 ನೇ ಪ್ರತಿವಾದಿಯು ಪಡೆದುಕೊಂಡಿರುತ್ತಾರೆಂದು, 1 ನೇ ಪ್ರತಿವಾದಿಯು ದಿನಾಂಕ 19.06.2015 ರಂದು ಐಟಂ ನಂ.2 ರ ಆಸ್ತಿಯನ್ನು ದಾನ ಪತ್ರವನ್ನು ಬರೆದುಕೊಟ್ಟಿದ್ದು 2 ನೇ ಪ್ರತಿವಾದಿಯರು ಅದನ್ನು ಒಪ್ಪಿಕೊಂಡಿದ್ದು ಖಾತೆ ಕೂಡ ಅವರ ಹೆಸರಿಗೆ ಬದಲಾವಣೆಯಾಗಿರುತ್ತದೆಂದು ಐಟಂ ನಂ.4 ರ ಆಸ್ತಿಯನ್ನು 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ದಿನಾಂಕ 06.01.2020 ರಂದು ವೀಲುನಾಮೆಯನ್ನು ಬರೆದು ಕೊಟ್ಟಿರುತ್ತಾರೆಂದು, 1 ನೇ ಪ್ರತಿವಾದಿಯು ತೀರಿಕೊಂಡ ನಂತರ

ಖಾತೆ ಕೂಡ ಅವರ ಹೆಸರಿಗೆ ಬದಲಾವಣೆಯಾಗಿರುತ್ತದೆ. 2 ನೇ ಪ್ರತಿವಾದಿಯು ಇಂಜಿನಿಯರಿಂಗ್ ಪದವಿಯನ್ನು ಪಡೆದು ಕೊಂಡಿದ್ದು ಅವರು ಕ್ಯಾಲಿಪೋರ್ನಿಯಾದಲ್ಲಿ ಕೆಲಸ ಮಾಡುತ್ತಿದ್ದು ಕೈತುಂಬಾ ಸಂಬಳ ಬರುತ್ತಿದ್ದು ಆ ಸಂಬಳದಿಂದ ಅವರು ಐಟಂ ನಂ.5 ರ ಆಸ್ತಿಯನ್ನು ದಿನಾಂಕ 26.11.1994 ರಂದು ಖರೀದಿ ಮಾಡಿರುತ್ತಾರೆಂದು, ತದನಂತರ ಅವರು ಆ ಆಸ್ತಿಯ ಸ್ವಾಧೀನವನ್ನು ಒಪ್ಪಿಕೊಂಡು ಅನುಭವಿಸಿಕೊಂಡು ಬಂದಿರುತ್ತಾರೆಂದು ಅನಗತ್ಯ ಕೃತ್ಯದಿಂದ 2 ನೇ ಪ್ರತಿವಾದಿಯು ಮಾನಸಿಕ ಮತ್ತು ಆರ್ಥಿಕ ನಷ್ಟದಿಂದ ಬಳಲುತ್ತಿದ್ದಾರೆ , ಆದ್ದರಿಂದ ದಾವಾ ಪತ್ರದಲ್ಲಿ ದಾವಾ ಅನುಸೂಚಿ ಐಟಂ ನಂ.1, 2, 4 ಮತ್ತು 5 ನ್ನು ಹೊಡೆದು ಹಾಕಬೇಕೆಂದು ಕೋರಿಕೊಂಡಿರುತ್ತಾರೆ .

9. ವಾದಿಯು ತಮ್ಮ ತಕರಾರಿನಲ್ಲಿ ಅರ್ಜಿದಾರರು ಸಲ್ಲಿಸಿರುವ ಅರ್ಜಿಯು ಕಾನೂನಡಿಯಲ್ಲಿ ಊರ್ಜಿತವಾಗಿರುವುದಿಲ್ಲವೆಂದು, ಈ ದಾವೆಯು ಪ್ರತಿವಾದಿಯ ವಿಚಾರಣೆಗೆ ನಿಗದಿ ಪಡಿಸಿದ ಸಮಯದಲ್ಲಿ ಕೇವಲ ದಾವೆಯನ್ನು ಮುಂದುವರೆಸುವ ಒಂದೇ ಉದ್ದೇಶದಿಂದ ಮತ್ತು ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಅರ್ಜಿಯನ್ನು ಸಲ್ಲಿಸಲಾಗಿದೆ. ಈ ಅರ್ಜಿಯಲ್ಲಿ ಯಾವುದೇ ರೀತಿಯಾದಂತಹ ಹುರುಳಿರುವುದಿಲ್ಲ. ಆದ್ದರಿಂದ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ .

10. ಈ ದಾವೆಯನ್ನು ವಾದಿಯು ಪ್ರತಿವಾದಿಯರ ವಿರುದ್ಧ ದಾವಾಸ್ತಿಯಲ್ಲಿ ಅವರಿಗೆ 1/3 ಅಂಶ ಹಿಸ್ಸೆಯಿದೆ ಎಂದು ಅದನ್ನು ವಿಭಜಿಸಿ ಕೊಡಬೇಕೆಂದು ಕೋರಿಕೊಂಡಿರುತ್ತಾರೆ. ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ದ ದಾವಾಸ್ತಿಯಲ್ಲಿ ಅವರಿಗೆ 1/3 ಅಂಶ ಹಿಸ್ಸೆ ಕೊಡಬೇಕೆಂದು ಕೋರಿಕೊಂಡಿರುತ್ತಾರೆ. ವಾದಿಯು ದಾವಾ ಪತ್ರದಲ್ಲಿ 1 ನೇ ಪ್ರತಿವಾದಿಗೆ ಇಬ್ಬರು ಹೆಂಡತಿಯರಿದ್ದು ಅವರುಗಳಲ್ಲಿ ಗೌರಮ್ಮ ಇವರಿಗೆ ಜಿ .ವಿ ನಟರಾಜ್ ಮತ್ತು ಜಿ . ವಿ.

ಸಂಗೀತ ಎಂಬ ಇಬ್ಬರು ಮಕ್ಕಳು ಇದ್ದು, 1 ನೇ ಪ್ರತಿವಾದಿಯ 2 ನೇ ಹೆಂಡತಿ ಅನ್ನಪೂರ್ಣಮ್ಮ ಇವರು ವಾದಿಯ ತಾಯಿಯಾಗಿರುತ್ತಾರೆಂದು ಹಾಗೂ ವಾದಿಯ ತಂದೆ ಮತ್ತು ಅವರ ಸಹೋದರರು ಒಟ್ಟು ಕುಟುಂಬದ ಆಸ್ತಿಯನ್ನು 1977-78 ರಲ್ಲಿ ವಿಭಾಗ ಮಾಡಿಕೊಂಡಿದ್ದು , ಸೈಟನ್ನು 1 ನೇ ಪ್ರತಿವಾದಿ ಒಟ್ಟು ಕುಟುಂಬದ ಸಂಪಾದನೆಯಿಂದ ಖರೀದಿ ಮಾಡಿರುತ್ತಾರೆಂದು, 1 ನೇ ಪ್ರತಿವಾದಿ ದಾನ ಪತ್ರ ಬರೆಯುವ ಸಮಯದಲ್ಲಿ ವಾದಿಯ ಒಪ್ಪಿಗೆ ಪಡೆದು ಕೊಂಡಿಲ್ಲವೆಂದು, ದಾವಾ ಐಟಂ ನಂ.4 ನ್ನು 1 ನೇ ಪ್ರತಿವಾದಿ ಒಟ್ಟು ಕುಟುಂಬದ ಸಂಪಾದನೆಯಿಂದ ಖರೀದಿ ಮಾಡಿದ್ದು ದಾವಾ ಐಟಂ ನಂ.5 ರ ಆಸ್ತಿಯನ್ನು 2 ನೇ ಪ್ರತಿವಾದಿ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆಂದು, ಆದ್ದರಿಂದ ದಾವಾಸ್ತಿಯಲ್ಲಿ ಅವರ ಹಿಸ್ಸೆಯನ್ನು ವಿಭಜಿಸಿ ಕೊಡಬೇಕೆಂದು ಕೋರಿಕೊಂಡಿರುತ್ತಾರೆ.

11. ವಾದಿಯು ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು ಆ ಪಹಣಿ ಪತ್ರಿಕೆಯಲ್ಲಿ ದಾವಾ ಐಟಂ ನಂ.94/6 ಉಮಾಪತಿ ಇವರ ಹೆಸರಿನಲ್ಲಿ ಎಂ ಆರ್ ನಂ.11/93-94 ವಿಭಜನೆ ಮೂಲಕ ಖಾತೆ ಬದಲಾವಣೆಯಾಗಿದೆ ಎಂದು ನಮೂದು ಇರುತ್ತದೆ. 2 ನೇ ಪ್ರತಿವಾದಿಯು ವ್ಯವಸ್ಥಾಪನ ಪತ್ರದ ದಾನಪತ್ರಗಳ ಮತ್ತು ವೀಲುನಾಮೆಯ ಜೆರಾಕ್ಸ್ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ . 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ದಾವಾ ಐಟಂ ನಂ.1 ಮತ್ತು 2 ನ್ನು ಬರೆದುಕೊಟ್ಟಿದ್ದಾರೆ ಎಂಬುದನ್ನು ವಾದಿ ಮತ್ತು 2 ನೇ ಪ್ರತಿವಾದಿಯವರು ಒಪ್ಪಿಕೊಂಡಿರುತ್ತಾರೆ. 2 ನೇ ಪ್ರತಿವಾದಿ ತನ್ನ ಪ್ರತಿವಾದ ಪತ್ರದಲ್ಲಿ ದಾವಾ ಅನುಸೂಚಿ ಐಟಂ ನಂ.1 ಮತ್ತು 3 ಜಿ ಸಿ ಉಮಾಪತಿಯವರಿಗೆ 12.04.1971 ರ ನೊಂದಾಯಿತ ವ್ಯವಸ್ಥಾ ಪತ್ರದ ಮೂಲಕ ಬಂದಿರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ.

12. ವಾದಿಯ ಪ್ರಕಾರ ದಾವಾಸ್ತಿಯನ್ನು ವಾದಿಯರ ತಂದೆಗೆ 1977–78ರ ವಿಭಾಗ ಪತ್ರದ ಮೂಲಕ ವಿಭಜನೆ ಮಾಡಿಕೊಂಡಿದ್ದು ಅದರಂತೆ ಖಾತೆ ಕೂಡ ಬದಲಾವಣೆ ಯಾಗಿದ್ದು ವಾದಿಯು ಸಂಗಮೇಶ ಹಿರೇಮಠ ತಂದೆ ಪೊಂಪಯ್ಯ ಸ್ವಾ ಮಿ ಇವರನ್ನು ಮದುವೆಯಾಗಿದ್ದು ವಾದಿಯ ಗಂಡ ಕಡು ಬಡವರಾಗಿರುತ್ತಾರೆಂದು, ವಾದಿಯ ತಂದೆ ಅವರ ಬಗ್ಗೆ ಕೆಟ್ಟ ಅಭಿಪ್ರಾಯವನ್ನು ಹೊಂದಿರುತ್ತಾರೆ. ವಾದಿಯ ಪ್ರಕಾರ ದಾವಾಸ್ತಿಯು ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ ಎಂಬುದಾಗಿರುತ್ತದೆ.

13. ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 16 ರಡಿಯಲ್ಲಿ ಅನಾವಶ್ಯ ವಾಗಿರುಬಹುದಾದ ನಿಂದಾತ್ಮಕವಾಗಿರಬಹುದಾದ ಕ್ಷುಲ್ಲಕವಾಗಿರಬಹುದಾದ ಅಥವಾ ಕಿರುಕುಳಕಾರಿಯಾಗಿರಬಹುದಾದ ಅಥವಾ ದಾವೆಯನ್ನು ನ್ಯಾಯಯುತವಾಗಿ ಅಧಿವಿಚಾರಣೆ ಮಾಡುವುದಕ್ಕೆ ಪ್ರತಿಕೂಲವನ್ನುಂಟು ಮಾಡಬಹುದಾದ, ಪೇಚನ್ನುಂಟು ಮಾಡಬಹುದಾದ ಅಥವಾ ವಿಳಂಬವನ್ನುಂಟು ಮಾಡಬಹುದಾದ ಮತ್ತು ಇತರ ರೀತಿಯಲ್ಲಿ ನ್ಯಾಯಾಲಯ ಕ್ರಮದ ದುರುಪಯೋಗವೆನಿಸಬಹುದಾದ ಯಾವುದೇ ವಿಷಯವನ್ನು ಹೊಡೆದು ಹಾಕಲು ಅಥವಾ ದುರಸ್ತು ಮಾಡಲು ವ್ಯವಹರಣೆಯ ಯಾವುದೇ ಹಂತದಲ್ಲಿ ನ್ಯಾಯಾಲಯವು ಆದೇಶಿಸಬಹುದಾಗಿದೆ.

14. ಈ ದಾವೆಯಲ್ಲಿ ವಾದಿಯು ದಾವಾಸ್ತಿಯು ಅವರ ಪಿತ್ರಾರ್ಜಿತ ಆಸ್ತಿಯೆಂದು ಖಂಡನೆ ತೆಗೆದು ಕೊಂಡಿರುತ್ತಾರೆ. ದಾವಾಸ್ತಿಯು 1 ರಿಂದ 4 ನೇ ಪ್ರತಿವಾದಿಯವರ ಸ್ವಯಾರ್ಜಿತ ಆಸ್ತಿ ಹೌದೋ ಅಲ್ಲವೋ ಮತ್ತು ದಾವಾ ಅನುಸೂಚಿ ಐಟಂ ನಂ.5 ನ್ನು ಒಟ್ಟು ಕುಟುಂಬದ ಆಸ್ತಿಯಿಂದ ಖರೀದಿ ಮಾಡಿದ್ದಾರೋ ಅಥವಾ 2 ನೇ ಪ್ರತಿವಾದಿಯ ಸ್ವಂತ ಸಂಪಾದನೆಯಿಂದ ಖರೀದಿ ಮಾಡಿದ್ದಾರೋ ಎಂದು ಪರಿಗಣಿಸಬೇಕಾದಲ್ಲಿ ಸಾಕ್ಷಾಧಾರಗಳ

ಅವಶ್ಯಕತೆ ಇರುತ್ತದೆ. ಈಗಾಗಲೇ ಈ ನ್ಯಾಯಾಲಯವು ಈ ಎಲ್ಲಾ ಅಂಶಗಳ ಬಗ್ಗೆ ವಿವಾದಾಂಶ ರಚಿಸಿರುತ್ತದೆ ಮತ್ತು ಈ ದಾವೆಯು ವಿಚಾರಣೆಗೆ ನಿಗದಿ ಪಡಿಸಿದ್ದು ಸಂಪೂರ್ಣ ವಿಚಾರಣೆಯಾಗದೆ ಮತ್ತು ವಾದಿಯ ವಿವಾದವನ್ನು ಆಲಿಸದೆ ಪ್ರತಿವಾದಿಯು ಹೊಡೆದು ಹಾಕಬೇಕು ಎಂದು ಹೇಳಿದ ಅಂಶಗಳು ಅನಾವಶ್ಯಕವಾಗಿದೆ ಎಂದು ನ್ಯಾಯಾಲಯಕ್ಕೆ ಕಂಡು ಬಂದಿರುವುದಿಲ್ಲ, ಈಗಾಗಲೇ ಈ ದಾವೆಯಲ್ಲಿ ವಿವಾದಾಶವನ್ನು ರಚಿಸಿದ್ದು ಹಾಗೂ ಈ ದಾವೆಯು ವಾದಿಯ ಪಾಟೀ ಸವಾಲಿಗೆ ನಿಗದಿಪಡಿಸಿದ ಸಮಯದಲ್ಲಿ ಈ ಅರ್ಜಿಯನ್ನು ಸಲ್ಲಿಸಿರುವುದು ಕಂಡು ಬರುತ್ತದೆ.

15. ದಾವೆ ಚಾಲ್ತಿ ಯಲ್ಲಿರುವಾಗ ವಾದಿಯು ಮಧ್ಯಂತರ ಅರ್ಜಿ 8 ನ್ನು ಸಲ್ಲಿಸಿ ಐಟಂ ನಂ.4 ಮತ್ತು 5 ನ್ನು ಸೇರಿಸಿ ದಾವೆಯನ್ನು ತಿದ್ದುಪಡಿ ಮಾಡಲು ಕೋರಿಕೊಂಡಿದ್ದು ಆ ಅರ್ಜಿ ದಿಃ 04.07.2020 ರಂದು ಪುರಸ್ಕೃತವಾಗಿದ್ದು ಆ ಆದೇಶದ ವಿರುದ್ದ ಗೌರವಾನ್ವಿತ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ನಂ.13407/2020 ರಲ್ಲಿ ಅನ್ನಪೂರ್ಣ ಬಿ ಎಂ ಎಸ್ ಇವರು ಅರ್ಜಿಯನ್ನು ಸಲ್ಲಿಸಿದ್ದು ಗೌರವಾನ್ವಿತ ಉಚ್ಚ ನ್ಯಾಯಾಲಯ 04.07.2020 ರ ಆದೇಶವನ್ನು ಎತ್ತಿ ಹಿಡಿದು ಅರ್ಜಿಯನ್ನು ವಿಲೇವಾರಿ ಮಾಡಿರುತ್ತಾರೆ . ಗೌರವಾನ್ವಿತ ಉಚ್ಛ ನ್ಯಾಯಾಲಯವು ಈಗಾಗಲೇ ಮಧ್ಯಂತರ ಅರ್ಜಿಯನ್ನು ಎತ್ತಿ ಹಿಡಿದಿದ್ದು ಪುನಃ ಆ ಆಸ್ತಿಗಳನ್ನೇ ತೆಗೆದು ಹಾಕುವಂತಹ ಯಾವುದೇ ಅವಕಾಶ ಈ ನ್ಯಾಯಾಲಯಕ್ಕೆ ಇರುವುದಿಲ್ಲ ಆದ್ದರಿಂದ ಈ ಹಂತದಲ್ಲಿ ಪ್ರತಿವಾದಿಯು ದಾವಾಸ್ತಿ ಐಟಂ ನಂ.1, 2, 4 ಮತ್ತು 5 ನ್ನು ದಾವೆಯಿಂದ ತೆಗೆದು ಹಾಕಲು ಸಾಕಷ್ಟು ಕಾರಣ ಇದೆಯೆಂದು ತೋರಿಸಿರುವುದಿಲ್ಲ . ಆದ್ದರಿಂದ ಮೇಲೆ ಹೇಳಿದ ಕಾರಣಗಳಿಂದ ಅಂಶ-1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

15. **ಅಂಶ–2**– ಮೇಲೆ ಹೇಳಿದ ಕಾರಣಗಳಿಂದ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## ಆದೇಶ

**ಅರ್ಜಿದಾರರು / 2 ನೇ ಪ್ರತಿವಾದಿ ಸಲ್ಲಿಸಿದಂತಹ ಮಧ್ಯಂತರ ಅರ್ಜಿ–13 ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 16 ಸಹವಾಚಕ 151 ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ ಅರ್ಜಿಯನ್ನು ರೂ.300/– ಗಳ ಖರ್ಚಿನೊಂದಿಗೆ ವಜಾಗೊಳಿಸಲಾಗಿದೆ.**

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ , ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ 12 ನೇ ಜೂನ್ –2026 ರಂದು ಘೋಷಿಸಲಾಯಿತು)

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು

SUJATHA SUVARNA B

Digitally signed by SUJATHA SUVARNA B
Date: 2026.06.16 12:16:29 +0530